# IN THE COURT OF THE ADDL. SENIOR CIVIL JUDGE & JMFC., GUBBI

# **OS -222/2023**

Witness present and duly sworn on : 21-07-2026

Further Cross Examination: by Counsel for Defendant No.1 ,3 , 5, 7 :

ನಾವು ವಿಬಾಗವನ್ನು ಚಿಕ್ಕಣ್ಣ ರವರ ಆಸ್ತಿಯಲ್ಲಿ ಕೇಳುತ್ತಿದ್ದೇವೆ. ಚಿಕ್ಕಣ್ಣ ರವರಿಗೆ ಆಸ್ತಿ ಹೇಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಚಿಕ್ಕಣ್ಣರವರು ಜೀವಂತ ಇರುವುದಿಲ್ಲ. ಚಿಕ್ಕಣ್ಣ ರವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರು ಸಿದ್ದಮ್ಮ . ಸದರಿ ಚಿಕ್ಕಣ್ಣ ನನ್ನ ತಾಯಿಯ ಮುತ್ತಾತ . ನನ್ನ ತಾಯಿ ಜೀವಂತ ಇಲ್ಲ. ನನ್ನ ತಾಯಿ 2009 ರಲ್ಲಿ ಮರಣ ಹೊಂದಿರುತ್ತಾರೆ. ದಿನಾಂಕ ನನಗೆ ನೆನಪಿಲ್ಲ. ನನ್ನ ತಾಯಿಗೆ ಆರೋಗ್ಯದಲ್ಲಿ ತೊಂದರೆ ಇತು. ಅವರ ಆರೋಗ್ಯದ ಸಮಸ್ಯೆಯಿಂದ ಮರಣ ಹೊಂದಿರುತ್ತಾರೆ. ಸದರಿ ವಿಚಾರವಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮರಣ ಹೊಂದಿದಾಗ ನಾನು 3 ನೇ ತರಗತಿಯಲ್ಲಿ ಓದುತ್ತಿದ್ದು ನನಗೆ ಸುಮಾರು 8 ರಿಂದ 10 ವರ್ಪ ವಯಸ್ಸಾಗಿರಬಹುದು. ನನ್ನ ತಾಯಿ ಕಾಲು ಜಾರಿ ಚಾನಲ್ ನಲ್ಲಿ ಬಿದ್ದು ಮರಣ ಹೊಂದಿದ್ದಾರೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಪೋಲೀಸರ ಮುಂದೆ ದೂರು ಆಗಿದ್ದು ಮತ್ತು ನನ್ನ ತಾಯಿ ಶವ ತಿನಿಖಾ ಪರಿಕ್ಷೆ ಆಗಿತ್ತು ಎಂದರೆ ಸರಿಯಲ್ಲ. ನನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಬಲ್ಲೆರಾ ಎಂದರೆ ನನಗೆ ಗೊತ್ತಿಲ್ಲ.

ಚಿಕ್ಕಣ್ಣ ರವರಿಗೆ 9 ಎಕರೆ ಆಸ್ತಿ ಇತ್ತು . 9 ಎಕರೆ ಮೇಲ್ಪಟ್ಟು ಆಸ್ತಿ ಇರಲಿಲ್ಲ. ಚಿಕ್ಕಣ್ಣರವರಿಗೆ ಸಂಬಂಧಿಸಿದ 9 ಎಕರೆ ಆಸ್ತಿಯ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದೆ. ಸದರಿ ಪ್ರಮಾಣ ಪತ್ರವನ್ನು ನಾನು ಹೇಳಿ ಬರೆಸಿರುತ್ತೇನೆ. ಸದರಿ ಪ್ರಮಾಣ ಪತ್ರ ಎಷ್ಟು ಪುಟಗಳಿವೆ ಎಂದು ನನಗೆ ಗೊತ್ತಿಲ್ಲ.

ನನ್ನ ತಾಯಿಯ ಮದುವೆ ಯಾವಾಗ ಆಗಿದೆ ಎಂದರೆ ನನಗೆ ನೆನಪಿಲ್ಲ. ನನ್ನ ತಾಯಿಗೆ ಏನು ಖಾಯಿಲೆ ಇತ್ತು ನನಗೆ ನೆನಪಿಲ್ಲ. ನನ್ನ ತಾಯಿಯ ಆರೋಗ್ಯದ ಸಮಸ್ಯೆಯ ಬಗ್ಗೆ ನಾನು ತಿಳಿದುಕೊಳ್ಳಲು ನಾನು ಪ್ರಯತ್ನ ಪಟ್ಟಿಲ್ಲ. ಈ ದಾವೆಯನ್ನು 9 ಎಕರೆ ಆಸ್ತಿಗೆ ಸಲ್ಲಿಸಿರುತ್ತೇವೆ. 9 ಎಕರೆ ಆಸ್ತಿಯು ರಾಜಣ್ಣನವರ ಹೆಸರಿನಲ್ಲಿ ಇದೆ. ರಾಜಣ್ಣ ನವರಿಗೆ ಆಸ್ತಿ ಹೇಗೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 9 ಎಕರೆ ಆಸ್ತಿ ಸರ್ವೆ ನಂ 32 ರಲ್ಲಿ ಇರುತ್ತದೆ. 9 ಎಕರೆ ಜಮೀನಿನ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ದಾವೆಯನ್ನು ಎಷ್ಟು ಜನರ ವಿರುದ್ಧ ಸಲ್ಲಿಸಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಸಲ್ಲಿಸುವ ಮೊದಲು ನಾವು ಇನ್ನೊಂದು ದಾವೆಯನ್ನು ಸಲ್ಲಿಸಿದ್ದೇವೇ ಎಂದರೆ ಸರಿಯಲ್ಲ.

ನನ್ನ ತಾಯಿಗೆ ಒಬ್ಬ ಅಣ್ಣ ಇರುತ್ತಾರೆ. ಅವರ ಹೆಸರು ಕರೇಗೌಡ . ಸದರಿ ಕರೆಗೌಡರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಚಿಕ್ಕಣ್ಣ ನವರಿಗೆ 9 ಎಕರೆ ಮೇಲ್ಪಟ್ಟು ಜಮೀನು ಇತ್ತು ಎಂದರೆ ಸರಿಯಲ್ಲ. ನಾವು ನಮಗೆ ಬೇಕಾಗಿರುವ ಆಸ್ತಿಗೆ ಮಾತ್ರ ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

(Further cross examination deferred at the request of counsel for the defendant No.1 ,3 , 5, 7 : )

(Typed to my dictation in open court)

R.O.I & A.C.

sd/-

Addl. Senior Civil Judge and
JMFC., Gubbi